# ಮುಚ್ಚಿಗೆಯ ಮುಚ್ಚಟೆ !



ಚಳಿಗಾಲದಲ್ಲಿ ಹೊಸ ಗಿಡಗಳನ್ನು ನೆಟ್ಟು ಆರೈಕೆ ಮಾಡುವುದು ಕಷ್ಟ. ಆದರೆ ಗಿಡಗಳಿಗೆ ಮುಚ್ಚಿಗೆ ಮಾಡಿಸಿದರೆ ತೇವಾಂಶ ಉಳಿದು ಗಿಡುವ ಸೊಂಪಾಗಿ ಬೆಳೆಯುತ್ತದೆ. ಇಲ್ಲಿದೆ ಮುಚ್ಚಿಗೆಯ ಹಲವು ಮಾದರಿಗಳು.

■ ಚಿತ್ರ-ಲೇಖನ: **ಮಾಲತಿ ಹೆಗಡೆ**




**ಚ**ಳಿಗಾಲದ ತೊಂದರೆ ಕೇವಲ ಮನುಷ್ಯರಿಗೆ ಮಾತ್ರವಲ್ಲ. ಕೈತೋಟದಲ್ಲಿ ಬೆಳೆಸುವ ಗಿಡಗಳಿಗೂ ಈ ಕಾಲ ಕಷ್ಟವೇ. ಚಳಿಗಾಲದಲ್ಲಿ ಕೈ ತೋಟದಲ್ಲಿರುವ ಗಿಡಗಳೂ ಬಾಡಿ ಬಸವಳಿಯುತ್ತವೆ. ಹೂವಿನ ಗಿಡಗಳಲ್ಲಿ ಹೂ ಬಿಡುವ ಪ್ರಮಾಣದಲ್ಲಿ ಕೊಂಚ ಕಡಿಮೆಯಾಗುತ್ತದೆ. ಬ್ಲೂಸ್ಟ್ ರೋಗ ಕಾಣಿಸಿಕೊಳ್ಳುತ್ತದೆ.

ಈ ಅವಧಿಯಲ್ಲಿ ಹೊಸದಾಗಿ ಯಾವುದಾದರೂ ಗಿಡಗಳನ್ನು ನೆಡುವುದೆಂದರೆ ಬದುಕಿಸುವುದು ಕಷ್ಟ. ನೀರು ಹಾಕಿದರೆ ಬಹುಬೇಗ ಕೊಂಚವೂ ತೇವಾಂಶ ಉಳಿಯದಂತೆ ಆರಿಹೋಗುತ್ತದೆ. ಇದಕ್ಕೆಲ್ಲಾ ಕೆಲವು ಸರಳ ಉಪಾಯಗಳನ್ನು ಅನುಸರಿಸಿದರೆ ಪರಿಹಾರ ಸಾಧ್ಯ. ಅ ಚಳಿಗಾಲದಲ್ಲಿ ಗಿಡಗಳಿಗೆ ಮುಚ್ಚಿಗೆ ಮಾಡಿದರೆ ತೇವಾಂಶ ಉಳಿದು ಗಿಡಕ್ಕೆ ಅಗತ್ಯವಾದ

**(42ನೇ ಪುಟ ನೋಡಿ)**